

ಆ ಭಯಂಕರ ಕೂಗಾಟವನ್ನು ಕೇಳಿಸಿಕೊಂಡರೆನ್ನಬೇಕು.

ಅರೆಕುರುಡಾಗಿದ್ದ ಆಕೆ ಅಸಾಧ್ಯ ಕೋಪದಿಂದ ಇಡೀ ಮನೆಯನ್ನು ತಡಕಾಡಿದಳು. ಕಡೆಗೂ ಹುಡುಗಿ ಕಣ್ಣಿಗೆ ಬಿದ್ದಾಗ ಅವಳಿಗೆ ಆಘಾತವಾಯಿತು. ಜ್ವರದಿಂದ ಬೆಂದ ರೇವತಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಳು. ಮುದುಕಿಯ ಎದೆ ಕಳವಳದಿಂದ, ಭಯದಿಂದ ಘಾಸಿಗೊಂಡಿತು. ಏನು ಮಾಡಬೇಕು, ಯಾರ ಸಹಾಯ ತೆಗೆದುಕೊಳ್ಳಬೇಕು, ಅವಳಿಗೆ ಗೊತ್ತಾಗಲಿಲ್ಲ. ಕೆರಳುವಿಕೆಯಿಂದ ತೇಕುತ್ತ, ಭರವಸೆಯೆಲ್ಲವನ್ನೂ ಕಳೆದುಕೊಂಡವಳಂತೆ, 'ತನಗೆ ತಾನೇ ತಗುಲಿಸಿಕೊಂಡ ಕಾಯಿಲೆಗೆ ಯಾವ ಔಷಧಿ ತಾನೇ ಇದ್ದೀತು!' ಎಂದಳು. ಅವಳ ದೃಷ್ಟಿಯಲ್ಲಿ ರೇವತಿ ಕಲಿಯಬೇಕೆಂಬ ಧೈರ್ಯ ಮಾಡಿದ್ದರಿಂದಲೇ ಜ್ವರ ತಂದುಕೊಂಡಿದ್ದಳು!

ಒಂದು, ಎರಡು, ಮೂರು, ನಾಲ್ಕು, ಐದು ದಿನ ಕಳೆಯಿತು. ರೇವತಿ ಕಣ್ಣುಗಳನ್ನು ಮುಚ್ಚಿಕೊಂಡು, ತುಟಿಗಳನ್ನು ಅಗಲಿಸದೆ ನೆಲಕ್ಕೇ ಅಂಟಿಕೊಂಡಿದ್ದಳು. ಆರನೆಯ ದಿನ ಬೆಳಗ್ಗೆ ಒಂದೆರಡು ಬಾರಿ ಬಿಕ್ಕಿದಳು. ಮುದುಕಿ ಹುಡುಗಿಯ ಮೈಮೇಲೆ ಕೈಯಾಡಿಸಿ ನೋಡಿದಳು. ಮುಟ್ಟಿದಲ್ಲೆಲ್ಲ ತಣ್ಣಗೆ. ಬಹುಶಃ ಜ್ವರ ಬಿಟ್ಟಿರಬೇಕು. ರೇವತೀ ಎಂದು ಕೂಗಿದಳು. ಅದಕ್ಕೆ ಉತ್ತರವೆಂಬಂತೆ ರೇವತಿ ಅಸ್ಪಷ್ಟವಾಗಿ ಏನೋ ಅಂದವಳು ಕುಡಿಯಲು ನೀರು ಕೇಳಿ, ಸುತ್ತಮುತ್ತಲೂ ವಿಚಿತ್ರವಾಗಿ ನೋಡಿ, ಏನೋ ಬಡಬಡಿಸತೊಡಗಿದಳು. ಹಳ್ಳಿಯ ವೈದ್ಯನೊಬ್ಬ ಅವಳನ್ನು ಒಂದೇ ಒಂದು ಕ್ಷಣ ನೋಡಿದ್ದರೂ ಸಾಕು, ಹೇಳಿಬಿಡುತ್ತಿದ್ದ: 'ನೀರಡಿಕೆ, ಜ್ವರ, ಸನ್ನಿ; ಇವು ಸಾವು ಸನ್ನಿಹಿತವಾಗುತ್ತಿರುವ ಕುರುಹುಗಳು.' ಆದರೆ, ಪಾಪದ ಅಜ್ಜಿಗೆ ತುಂಬ ಸಮಾಧಾನವೆನಿಸಿತು. ಜ್ವರ ಬಿಟ್ಟಿತು, ಹುಡುಗಿ ಕಣ್ಣುಬಿಡುವಂತಾಯಿತು; ಒಂದೆರಡು ಮಾತೂ ಆಡಿ ಕುಡಿಯಲು ನೀರು ಕೇಳುವಂತಾಯಿತು. ಒಂದಿಷ್ಟು ಗಂಜಿ ಕುಡಿದರೆ ಶಕ್ತಿ ಬಂದು ಅವಳು ಮತ್ತೆ ತನ್ನ ಕಾಲ ಮೇಲೆ ತಾನು ನಿಂತುಕೊಂಡಾಳು.

'ಏಳಬೇಡ. ಮಲಗಿದಲ್ಲೇ ಇರು. ನಿಂಗೊಂದು ಚೂರು ಏನಾದರೂ ಬೇಯಿಸಿ ಕೊಡ್ತೀನಿ' ಎಂದಳು ಅಜ್ಜಿ. ಆಮೇಲೆ ಆ ಕೋಣೆಯಿಂದ ಹೊರಗೆ ಹೋಗಿ ಒಂದು ಹಿಡಿ ಅಕ್ಕಿಗಾಗಿ ಮಡಕೆಗಳಲ್ಲೆಲ್ಲ ತಡಕಾಡಿದಳು. ನಿರಾಶೆ ಕವಿದು ನಿಟ್ಟುಸಿರುಬಿಡುತ್ತಾ ಕೆಳಗೆ ಕುಳಿತಳು. ಅವಳ ಕಣ್ಣು ಸರಿಯಾಗಿ ಕಾಣಿಸುತ್ತಿದ್ದಿದ್ದರೆ ಐದು ದಿನಕ್ಕಷ್ಟೇ ಸಾಕಾಗುವಷ್ಟಿದ್ದ ದಿನಸಿ ಹತ್ತು ದಿನಕ್ಕಾಗಿತ್ತೆಂದು ಗೊತ್ತಾಗುತ್ತಿತ್ತು.

ಆದರೂ ಆಕೆಯಲ್ಲೊಂದು ಭರವಸೆಯ ಬೆಳಕಿತ್ತು. ಮನೆಯಲ್ಲಿದ್ದ ಒಂದೇ ಒಂದು ವಸ್ತುವನ್ನು – ತಳದಲ್ಲಿ ತೂತಾಗಿದ್ದ ಹಳೆಯ ಕಂಚಿನ ಪಾತ್ರೆ – ಎತ್ತಿಕೊಂಡು ಹರಿಯ ಅಂಗಡಿಗೆ ಹೋದಳು.